# 4. ಜೀವಕ್ರಿಯೆಗಳು

**1. ಜೀವಕ್ರಿಯೆಗಳು ಎಂದರೇನು?**

ಜೀವಿಗಳ ಬೆಳವಣಿಗೆಯಲ್ಲಿ ನಿರ್ವಹಣಾ ಕಾರ್ಯವನ್ನು ಮಾಡುವ ಪ್ರಕ್ರಿಯೆಗಳೇ ಜೀವಕ್ರಿಯೆಗಳು.

**2. ಜೀವಿಗಳಲ್ಲಿ ನಡೆಯುವ ಪ್ರಮುಖ ಜೀವಕ್ರಿಯೆಗಳನ್ನು ಹೆಸರಿಸಿ.**

ಸಸ್ಯಗಳಲ್ಲಿ: ದ್ಯುತಿಸಂಶ್ಲೇಷಣೆ, ಸಾಗಾಣಿಕೆ, ಉಸಿರಾಟ, ವಿಸರ್ಜನೆ. . .

ಪ್ರಾಣಿಗಳಲ್ಲಿ: ಜೀರ್ಣಕ್ರಿಯೆ, ಉಸಿರಾಟಕ್ರಿಯೆ, ಸಾಗಾಣಿಕೆ, ವಿಸರ್ಜನೆ. . ಇತ್ಯಾದಿ

**3. ಕೆಳಮಟ್ಟದ ಜೀವಿಗಳಾದ ಏಕಕೋಶಜೀವಿಗಳಲ್ಲಿ ನಡೆಯುವ ಜೀವನಕ್ರಿಯೆಯನ್ನು ಹೆಸರಿಸಿ.**

ಏಕಕೋಶಜೀವಿಗಳ ದೇಹವು ಒಂದೇ ಒಂದು ಜೀವಕೋಶದಿಂದ ಆಗಿರುವುದರಿಂದ, ಜೀವಿಯ ಎಲ್ಲಾ ಜೈವಿಕಪ್ರಕ್ರಿಯೆಗಳು ವಿಸರಣೆ ಕ್ರಿಯೆ ಮೂಲಕ ನಡೆಯುತ್ತವೆ.

**4. ಮನುಷ್ಯರಂಥ ಬಹುಕೋಶೀಯ ಜೀವಿಗಳ ಆಕ್ಸಿಜನ್ ಆವಶ್ಯಕತೆಯನ್ನು ಪೂರೈಸಲು ವಿಸರಣೆಯು ಸಾಕಾಗುವುದಿಲ್ಲ. ಏಕೆ?**

ಮನುಷ್ಯರಂಥ ಬಹುಕೋಶೀಯ ಜೀವಿಗಳ ದೇಹ ಹೆಚ್ಚು ಸಂಕೀರ್ಣವಾಗಿರುವುದರಿಂದ ಆಹಾರದ ವಿಭಜನೆ ಮತ್ತು ಶಕ್ತಿಯ ಬಿಡುಗಡೆಗೆ ಹೆಚ್ಚಿನ ಪ್ರಮಾಣದ ಆಕ್ಸಿಜನ್ ಅವಶ್ಯಕತೆಯಿದೆ. ಇದನ್ನು ಕೇವಲ ವಿಸರಣೆಯಿಂದ ಪೂರೈಸಲು ಸಾಧ್ಯವಿಲ್ಲ.

**5. ಕೆಲವೊಂದಕ್ಕೆ ಜೀವವಿದೆ ಎಂದು ನಿರ್ಧರಿಸಲು ನಾವು ಬಳಸುವ ಮಾನದಂಡಗಳೇನು?**

ಜೀವವಿದೆ ಎಂದು ನಿರ್ಧರಿಸುವ ಪ್ರಮುಖ ಅಂಶವೆಂದರೆ ಚಲನೆ. ಆದರೆ ಚಲನೆಯೊಂದೆ ಮಾನದಂಡವಲ್ಲ. ಪೋಷಣೆ, ಬೆಳವಣಿಗೆ, ಇತರೆ ಜೀವಕ್ರಿಯೆಗಳ ಆಧಾರದ ಮೇಲೆ ಜೀವವಿದೆ ಎಂದು ನಿರ್ಧರಿಸಬಹುದು.

**6. ಒಂದು ಜೀವಿಯ ಬೆಳವಣಿಗೆಗಾಗಿ ಬಳಸುವ ಹೊರಗಿನ ಕಚ್ಚಾ ವಸ್ತುಗಳು ಯಾವುವು?**

ಪ್ರಾಣಿಗಳಲ್ಲಿ: ಆಹಾರ, ನೀರು, ಆಕ್ಸಿಜನ್, ಸಸ್ಯಗಳಲ್ಲಿ: ನೀರು, ಕಾರ್ಬನ್ ಡೈಆಕ್ಸೈಡ್, ಆಕ್ಸಿಜನ್, ಸೂರ್ಯನಶಾಖ

**7. ಯಾವ ಪ್ರಕ್ರಿಯೆಗಳು ಜೀವವನ್ನು ನಿರ್ವಹಿಸಲು ಅಗತ್ಯವಾಗಿದೆ ಎಂದು ನೀವು ಪರಿಗಣಿಸುವಿರಿ?**

ಪೋಷಣೆ, ಉಸಿರಾಟ, ಸಾಗಾಣಿಕೆ, ಬೆಳವಣಿಗೆ, ವಿಸರ್ಜನೆ.

**8. ಪೋಷಣೆ ಎಂದರೇನು?**

ಜೀವಿಗಳು ಆಹಾರವನ್ನು ಪಡೆದು, ಸೇವಿಸಿ, ಜೀರ್ಣಿಸಿ ಅದನ್ನು ದೇಹಗತವನ್ನಾಗಿ ಮಾಡಿಕೊಳ್ಳುವ ಪ್ರಕ್ರಿಯೆಗೆ ಪೋಷಣೆ ಎನ್ನುವರು.

**9. ಸ್ವಪೋಷಕಗಳಲ್ಲಿ ಪೋಷಣೆ ಹೇಗೆ ನಡೆಯುತ್ತದೆ.**

ತಮ್ಮ ಆಹಾರವನ್ನು ತಾವೇ ತಯಾರಿಸಿಕೊಳ್ಳುವ ಜೀವಿಗಳಿಗೆ ಸ್ವಪೋಷಕಗಳು ಎನ್ನುವರು. ಎಲ್ಲಾ ಹಸಿರು ಸಸ್ಯಗಳು ಮತ್ತು ಕೆಲವು ಬಗೆಯ ಬ್ಯಾಕ್ಟೀರಿಯಾಗಳು ಸ್ವಪೋಷಕಗಳಾಗಿವೆ.

ಸಸ್ಯಗಳು ಕಾರ್ಬನ್ ಡೈಆಕ್ಸೈಡ್ ಮತ್ತು ನೀರನ್ನು ಸೂರ್ಯನ ಬೆಳಕಿನ ಸಮ್ಮುಖದಲ್ಲಿ ಸಂಶ್ಲೇಷಿಸಿ ಪಿಷ್ಟವನ್ನು ತಯಾರಿಸಿ, ಆಕ್ಸಿಜನ್ ಅನ್ನು ಬಿಡುಗಡೆ ಮಾಡುತ್ತವೆ.

**10. ದ್ಯುತಿ ಸಂಶ್ಲೇಷಣೆಗೆ ಅಗತ್ಯವಾದ ಪ್ರತಿಯೊಂದು ಕಚ್ಚಾ ಪದಾರ್ಥವನ್ನು ಸಸ್ಯಗಳು ಯಾವ ಮೂಲದಿಂದ ಪಡೆದುಕೊಳ್ಳುತ್ತವೆ.**

* ಸಸ್ಯಗಳು ಎಲೆಗಳಲ್ಲಿರುವ **ಪತ್ರರಂಧ್ರ**ಗಳ ಮೂಲಕ **ಕಾರ್ಬನ್ ಡೈಆಕ್ಸೈಡ್**ನ್ನು ವಾತಾವರಣದಿಂದ ಪಡೆದುಕೊಳ್ಳುತ್ತವೆ.
* **ಬೇರು**ಗಳ ಸಹಾಯದಿಂದ ಮಣ್ಣಿನಲ್ಲಿರುವ ನೀರನ್ನು ಹೀರಿಕೊಳ್ಳುತ್ತವೆ.
* ಎಲೆಗಳಲ್ಲಿರುವ **ಪತ್ರಹರಿತ್ತಿ**ನಿಂದ **ಸೂರ್ಯನ ಶಾಖ**ವನ್ನು ಹೀರಿಕೊಳ್ಳುತ್ತವೆ.

**11. ದ್ಯುತಿಸಂಶ್ಲೇಷಣಾಕ್ರಿಯೆಯ ರಾಸಾಯನಿಕ ಕ್ರಿಯೆ ಬರೆಯಿರಿ.**

$$6CO_2 + 12H_2O \xrightarrow[\text{ಸೂರ್ಯನ ಶಾಖ}]{\text{ಪತ್ರಹರಿತ್ತು}} C_6H_{12}O_6 + 6CO_2 + 6H_2O$$

**12. ನಮ್ಮ ಜಠರದಲ್ಲಿ ಆಮ್ಲದ ಪಾತ್ರವೇನು?**

ಜಠರವು ಹೈಡ್ರೋಕ್ಲೋರಿಕ್‌ಆಮ್ಲ(HCl)ವನ್ನು ಸ್ರವಿಸುತ್ತದೆ. ಇದು ಪೆಪ್ಸಿನ್ ಕಿಣ್ವದ ಕ್ರಿಯೆಯನ್ನು ಉತ್ತೇಜಿಸಲು ಆಮ್ಲೀಯ ಮಾಧ್ಯಮ ಉಂಟುಮಾಡಿ, ಆಹಾರವನ್ನು ಚೆನ್ನಾಗಿ ಮಿಶ್ರಣ ಮಾಡುತ್ತದೆ.

**13. ಜೀರ್ಣಕಾರಿ ಕಿಣ್ವಗಳ ಪಾತ್ರವೇನು?**

* ಜೀರ್ಣಕಾರಿ ಕಿಣ್ವಗಳು ಸಂಕೀರ್ಣ ಆಹಾರವನ್ನು ಸರಳ ವಸುಗಳನ್ನಾಗಿ ವಿಭಜಿಸುತ್ತವೆ
* ಜೈವಿಕ ಕ್ರಿಯೆಗಳಿಗೆ ಅವಶ್ಯಕವಾದ ವಸ್ತುಗಳನ್ನು ಒದಗಿಸುತ್ತವೆ.

**14. ಪಚನಗೊಂಡ ಆಹಾರವನ್ನು ಹೀರಿಕೊಳ್ಳಲು ಸಣ್ಣಕರುಳು ಹೇಗೆ ವಿನ್ಯಾಸಗೊಂಡಿದೆ?**

* ಸಣ್ಣಕರುಳಿನ ಒಳಭಾಗದ ಗೋಡೆಗಳು ವಿಲ್ಲೈಗಳೆಂಬ ಬೆರಳಿನಾಕಾರದ ರಚನೆಗಳಿಂದ ಕೂಡಿದ್ದು, ಇವುಗಳು ಆಹಾರವನ್ನು ಹೀರಿಕೊಳ್ಳಲು ಮೇಲ್ಮೈ ಪ್ರದೇಶವನ್ನು ಹೆಚ್ಚಿಸುತ್ತವೆ.
* ವಿಲ್ಲೈಗಳು ರಕ್ತನಾಳಗಳಿಂದ ಕೂಡಿದ್ದು, ರಕ್ತನಾಳಗಳು ಹೀರಿಕೊಂಡ ಆಹಾರವನ್ನು ರಕ್ತದ ಮೂಲಕ ದೇಹದ ಪ್ರತಿಯೊಂದು ಜೀವಕೋಶವನ್ನು ತಲುಪಿಸುತ್ತವೆ.

**15. ಉಸಿರಾಟಕ್ರಿಯೆಗೆ ಆಕ್ಸಿಜನ್ ಅನ್ನು ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಜಲಜೀವಿಗಳಿಗಿಂತ ನೆಲಜೀವಿಗಳು ಹೊಂದಿರುವ ಅನುಕೂಲತೆಗಳೇನು?**

ಜಲಜೀವಿಗಳು ನೀರಿನಲ್ಲಿ ಕರಗಿರುವ ಆಕ್ಸಿಜನ್ ಅನ್ನು ಬಳಸಿಕೊಳ್ಳುತ್ತವೆ.

ನೆಲಜೀವಿಗಳು ಪರಿಸರದಲ್ಲಿನ ಮುಕ್ತ ಆಕ್ಸಿಜನ್ ಅನ್ನು ಬಳಸಿಕೊಳ್ಳುತ್ತವೆ. ಇಲ್ಲಿರುವ ಆಕ್ಸಿಜನ್ ಪ್ರಮಾಣ ನೀರಿನಲ್ಲಿ ಕರಗಿರುವ ಆಕ್ಸಿಜನ್‌ಗಿಂತ ಹೆಚ್ಚು. ಇದು ಮುಕ್ತ ಆಕ್ಸಿಜನ್ ಆಗಿರುವುದರಿಂದ ದೇಹದಲ್ಲಿ ಯಾವುದೇ ಹೆಚ್ಚಿನ ಮಾರ್ಪಾಟು ಬೇಕಾಗಿಲ್ಲ.

**16. ವಿವಿಧ ಪ್ರಾಣಿಗಳಲ್ಲಿ ಆಕ್ಸಿಜನ್ ಉತ್ಕರ್ಷಣದಿಂದ ಶಕ್ತಿಯನ್ನು ಒದಗಿಸುವ ವಿಭಿನ್ನ ಪ್ರಕ್ರಿಯೆಗಳು ಯಾವುವು?**




**17. ಮನುಷ್ಯರಲ್ಲಿ ಆಕ್ಸಿಜನ್ ಮತ್ತು ಕಾರ್ಬನ್ ಡೈಆಕ್ಸೈಡ್‌ಗಳ ಸಾಗಾಣಿಕೆ ಹೇಗೆ ಆಗುತ್ತದೆ?**

ಕೆಂಪು ರಕ್ತಕಣಗಳಲ್ಲಿರುವ ಹಿಮೋಗ್ಲೋಬಿನ್ ಆಕ್ಸಿಜನ್‌ನೆಡೆಗೆ ಹೆಚ್ಚಿನ ಆಕರ್ಷಣೆ ಹೊಂದಿದ್ದು, ಇದು ಶ್ವಾಸಕೋಶಗಳಿಂದ ಆಕ್ಸಿಜನ್ ಅನ್ನು ದೇಹದ ಇತರೆ ಭಾಗಗಳಿಗೆ ಸಾಗಿಸುತ್ತದೆ. ಕಾರ್ಬನ್ ಡೈಆಕ್ಸೈಡ್ ಆಕ್ಸಿಜನ್‌ಗಿಂತ ನೀರಿನಲ್ಲಿ ಉತ್ತಮವಾಗಿ ಕರಗುತ್ತದೆ, ಹಾಗಾಗಿ ರಕ್ತದ ಪ್ಲಾಸ್ಮಾದ ಮೂಲಕ ಶ್ವಾಸಕೋಶಗಳಿಗೆ ಸಾಗಾಣಿಕೆಯಾಗುತ್ತದೆ.

**18. ಅನಿಲಗಳ ವಿನಿಮಯ ಪ್ರದೇಶವನ್ನು ಹೆಚ್ಚಿಸಲು ಮನುಷ್ಯರಲ್ಲಿ ಶ್ವಾಸಕೋಶಗಳು ಹೇಗೆ ವಿನ್ಯಾಸಗೊಂಡಿವೆ?**

ಶ್ವಾಸಕೋಶದೊಳಗೆ ಶ್ವಾಸನಾಳವು ಕವಲುಗಾಳಾಗಿ ಬ್ರಾಂಕಿಯೋಲ್‌ಗಳಾಗುತ್ತದೆ. ಬ್ರಾಂಕಿಯೋಲ್‌ಗಳು ಅಂತಿಮವಾಗಿ ಬಲೂನಿನಂತಹ ರಚನೆಗಳಾಗಿ ಗಾಳಿಯಗೂಡುಗಳಾಗುತ್ತವೆ. ಈ ಗಾಳಿಗೂಡುಗಳು ಒಂದು ಮೇಲ್ಮೈಯನ್ನು ಒದಗಿಸುತ್ತವೆ. ಗಾಳಿಗೂಡುಗಳ ಗೋಡೆಯು ವಿಶಾಲ ವ್ಯಾಪ್ತಿಯ ರಕ್ತನಾಳಗಳ ಜಾಲವನ್ನು ಹೊಂದಿವೆ. ಇಲ್ಲಿ ಅನಿಲಗಳ ವಿನಿಮಯ ನಡೆಯುತ್ತದೆ.

**19. ಮನುಷ್ಯರಲ್ಲಿ ಸಾಗಾಣಿಕೆ ವ್ಯೂಹದ ಘಟಕಗಳಾವುವು? ಈ ಘಟಕಗಳ ಕಾರ್ಯಗಳೇನು?**

ಮನುಷ್ಯರಲ್ಲಿ ಸಾಗಾಣಿಕಾ ವ್ಯೂಹದ ಘಟಕಗಳೆಂದರೆ: ಹೃದಯ, ರಕ್ತ ಮತ್ತು ರಕ್ತನಾಳಗಳು

- ರಕ್ತ: ಪೋಷಕಾಂಶಗಳು, ಆಕ್ಸಿಜನ್, ಕಾರ್ಬನ್ ಡೈಆಕ್ಸೈಡ್ ಮತ್ತು ತ್ಯಾಜ್ಯವಸ್ತುಗಳ ಸಾಗಾಣಿಕೆ
- ಹೃದಯ: ಆಕ್ಸಿಜನ್ ರಹಿತ ಮತ್ತು ಆಕ್ಸಿಜನ್‌ಯುಕ್ತ ರಕ್ತವನ್ನು ಕ್ರಮವಾಗಿ ಶ್ವಾಸಕೋಶಗಳಿಗೆ ಮತ್ತು ದೇಹದ ಇತರೆ ಭಾಗಗಳಿಗೆ ಪಂಪ್ ಮಾಡುತ್ತದೆ.
- ರಕ್ತನಾಳಗಳು: ಆಕ್ಸಿಜನ್‌ಯುಕ್ತ ರಕ್ತವನ್ನು ಹೃದಯದಿಂದ ದೇಹದ ವಿವಿಧ ಭಾಗಗಳಿಗೆ ಮತ್ತು ಆಕ್ಸಿಜನ್‌ರಹಿತ ರಕ್ತವನ್ನು ದೇಹದ ವಿವಿಧ ಭಾಗಗಳಿಂದ ಹೃದಯಕ್ಕೆ ಸಾಗಾಣಿಕೆ.

**20. ಸ್ತನಿಗಳಲ್ಲಿ ಮತ್ತು ಪಕ್ಷಿಗಳಲ್ಲಿ ಆಕ್ಸಿಜನ್‌ಯುಕ್ತ ಮತ್ತು ಆಕ್ಸಿಜನ್‌ರಿಕ್ತ ರಕ್ತವನ್ನು ಪ್ರತ್ಯೇಕಿಸುವುದು ಅಗತ್ಯವಾಗಿದೆ. ಏಕೆ?**

* ಸ್ತನಿಗಳು ಮತ್ತು ಪಕ್ಷಿಗಳು ಹೆಚ್ಚಿನ ಚಟುವಟಿಕೆಯಿಂದ ಕೂಡಿರುವ ಪ್ರಾಣಿಗಳಾದ್ದರಿಂದ ಹೆಚ್ಚಿನ ಶಕ್ತಿಯ ಅವಶ್ಯಕತೆಯಿದೆ.
* ಈ ಜೀವಿಗಳು ಬಿಸಿರಕ್ತಪ್ರಾಣಿಗಳಾಗಿರುವುದರಿಂದ ದೇಹದ ತಾಪವನ್ನು ಸ್ಥಿರವಾಗಿಟ್ಟುಕೊಳ್ಳುವ ಸಲುವಾಗಿ ಹೆಚ್ಚಿನ ಶಕ್ತಿ ಅವಶ್ಯಕ ಆದ್ದರಿಂದ ಹೆಚ್ಚಿನ ಆಕ್ಸಿಜನ್ ಅವಶ್ಯಕತೆಯಿಂದಾಗಿ ಆಕ್ಸಿಜನ್‌ಯುಕ್ತ ಮತ್ತು ಆಕ್ಸಿಜನ್‌ರಿಕ್ತ ರಕ್ತವನ್ನು ಪ್ರತ್ಯೇಕಿಸುವುದು ಅವಶ್ಯವಾಗಿದೆ.

**21. ಇಮ್ಮಡಿ ರಕ್ತ ಪರಿಚಲನೆ ಎಂದರೇನು?**
ಕಶೇರುಕಗಳಲ್ಲಿ ರಕ್ತವು ಪ್ರತಿಯೊಂದು ಪರಿಚಲನೆಗೆ ಎರಡು ಬಾರಿ ಹೃದಯವನ್ನು ಹಾದು ಹೋಗುವುದನ್ನು ಇಮ್ಮಡಿ ಪರಿಚಲನೆ ಎನ್ನುವರು.

**22. ಹೃದಯದ ಕವಾಟಗಳ ಕಾರ್ಯವೇನು?** ಕವಾಟಗಳು ರಕ್ತವನ್ನು ಕೇವಲ ಒಂದು ದಿಕ್ಕಿನಲ್ಲಿ ಹರಿಯಬಿಡುತ್ತದೆ.

**23. ಅಭಿದಮನಿಗಳ ಕಾರ್ಯತಿಳಿಸಿ.**ಅಭಿಧಮನಿಗಳು ವಿವಿಧ ಅಂಗಗಳಿಂದ ರಕ್ತವನ್ನು ಸಂಗ್ರಹಿಸಿ ಹೃದಯಕ್ಕೆ ಮರಳಿ ತರುತ್ತವೆ.

**24. ಅಪಧಮನಿಗಳ ಕಾರ್ಯ ತಿಳಿಸಿ.**
ಇವು ಒಂದು ವಿಧವಾದ ರಕ್ತನಾಳಗಳಾಗಿದ್ದು, ರಕ್ತವನ್ನು ಹೃದಯದಿಂದ ವಿವಿಧ ಅಂಗಗಳಿಗೆ ಕೊಂಡೊಯ್ಯುತ್ತವೆ.

**25. ರಕ್ತದ ಕಿರುತಟ್ಟೆಗಳ ಕಾರ್ಯವೇನು?**
ರಕ್ತದ ಕಿರುತಟ್ಟೆಗಳು ದೇಹದಾದ್ಯಂತ ಸಂಚರಿಸುತ್ತವೆ ಮತ್ತು ಗಾಯವಾದ ಪ್ರದೇಶಗಳಲ್ಲಿ ರಕ್ತವನ್ನು ಹೆಪ್ಪುಗಟ್ಟುವಂತೆ ಮಾಡಿ, ಸೋರಿಕೆಯನ್ನು ನಿಲ್ಲಿಸುತ್ತವೆ.

**26. ದುಗ್ಧರಸದ ಕಾರ್ಯ ತಿಳಿಸಿ.**
- ದುಗ್ಧರಸವು ಜೀರ್ಣವಾದ ಮತ್ತು ಕರುಳಿನಿಂದ ಹೀರಲ್ಪಟ್ಟ ಕೊಬ್ಬನ್ನು ಸಾಗಿಸುತ್ತದೆ.
- ಜೀವಕೋಶದ ಹೊರಗಿರುವ ಅಧಿಕ ದ್ರವ ಪದಾರ್ಥವನ್ನು ಮರಳಿ ರಕ್ತಕ್ಕೆ ಹರಿಯುವಂತೆ ಮಾಡುತ್ತದೆ.

**27. ಹೆಚ್ಚು ಸಂಕೀರ್ಣ ಸಸ್ಯಗಳ ಸಾಗಾಣಿಕಾ ಘಟಕಗಳಾವುವು?**
- ಕ್ಸೈಲಂ ಮತ್ತು ಫ್ಲೋಯಂ ಅಂಗಾಂಶಗಳು ಸಂಕೀರ್ಣ ಸಸ್ಯಗಳ ಪ್ರಮುಖ ಸಾಗಾಣಿಕಾ ಘಟಕಗಳು.
- ಕ್ಸೈಲಂ ಜಲವಾಹಕವು ಮತ್ತು ಫ್ಲೋಯಂ ಆಹಾರವಾಹಕ ಅಂಗಾಂಶವಾಗಿದೆ.

**28. ಸಸ್ಯಗಳಲ್ಲಿ ನೀರು ಮತ್ತು ಖನಿಜಗಳ ಸಾಗಾಣಿಕೆ ಹೇಗೆ ನಡೆಯುತ್ತದೆ?**
* ಸಸ್ಯಗಳಲ್ಲಿ ನೀರನ್ನು ಸಾಗಿಸುವ ಅಂಗಾಂಶ ಕ್ಸೈಲಂ
* ಕ್ಸೈಲಂ ಅಂಗಾಂಶವು ತನ್ನಲ್ಲಿನ ವಿವಿಧ ಘಟಕಗಳ ಸಹಾಯದಿಂದ ಸಸ್ಯದ ಎಲ್ಲಾ ಭಾಗಗಳಲ್ಲಿ ಸಂಪರ್ಕ ಹೊಂದಿದೆ.
* ಬೇರುಗಳಲ್ಲಿ ಮಣ್ಣಿನ ಸಂಪರ್ಕದಲ್ಲಿರುವ ಜೀವಕೋಶಗಳು ಸಕ್ರಿಯವಾಗಿ ಅಯಾನುಗಳನ್ನು ಹೀರಿಕೊಂಡು, ಬೇರು ಮತ್ತು ಮಣ್ಣಿನ ನಡುವಿನ ಅಯಾನುಗಳ ಸಾರತೆಯಲ್ಲಿ ವ್ಯತ್ಯಾಸ ಉಂಟುಮಾಡುತ್ತವೆ.
* ಈ ವ್ಯತ್ಯಾಸವನ್ನು ನಿವಾರಿಸಲು ಮಣ್ಣಿನಿಂದ ಬೇರುಗಳಿಗೆ ನೀರು ಚಲಿಸುತ್ತದೆ.
* ಬೇರಿನಲ್ಲಿನ ಕ್ಸೈಲಂನೊಳಗೆ ನೀರಿನ ಸ್ಥಿರವಾದ ಚಲನೆಯು ನೀರಿನ ಸ್ಥಂಭವನ್ನು ಉಂಟುಮಾಡಿ, ನೀರನ್ನು ನಿರಂತರವಾಗಿ ಮೇಲಕ್ಕೆ ತಳ್ಳುತ್ತಿರುತ್ತದೆ.
* ಸಸ್ಯವು ಸಾಕಷ್ಟು ನೀರಿನ ಪೂರೈಕೆಯನ್ನು ಹೊಂದಿದ್ದರೆ ಪತ್ರರಂಧ್ರಗಳ ಮೂಲಕ ನಷ್ಟವಾದ ನೀರು ಎಲೆಗಳಲ್ಲಿನ ಕ್ಸೈಲಂ ನಳಿಕೆಗಳ ಮೂಲಕ ಮರುಪೂರೈಕೆಯಾಗುತ್ತದೆ.
* ಎಲೆಗಳ ಜೀವಕೋಶದಿಂದ ಆವಿಯಾಗುವ ನೀರಿನ ಅಣುಗಳು ಚೋಷಣವನ್ನು ಉಂಟುಮಾಡುತ್ತವೆ, ಇದರಿಂದ ಬೇರುಗಳ ಕ್ಸೈಲಂ ಕೋಶಗಳು ನೀರನ್ನು ಹೀರಿಕೊಳ್ಳುತ್ತವೆ.

**29. ಸಸ್ಯಗಳಲ್ಲಿ ಆಹಾರದ ಸಾಗಾಣಿಕೆ ಹೇಗೆ ನಡೆಯುತ್ತದೆ?**
* ಸಸ್ಯಗಳಲ್ಲಿ ಆಹಾರ ಸಾಗಿಸುವ ಅಂಗಾಂಶ ಫ್ಲೋಯಂ
* ಆಹಾರ ಮತ್ತು ಇತರೆ ವಸ್ತುಗಳ ಸ್ಥಾನಾಂತರಣವು ಜರಡಿನಾಳದ ಪಾರ್ಶ್ವ ಸಂಗಾತಿ ಜೀವಕೋಶದ ಸಹಾಯದಿಂದ ಮೇಲ್ಮುಖ ಹಾಗೂ ಕೆಳಮುಖ ಎರಡೂ ದಿಕ್ಕುಗಳಲ್ಲಿ ನಡೆಯುತ್ತದೆ.
* ಎ.ಟಿ.ಪಿ.ಯಿಂದ ಶಕ್ತಿಯನ್ನು ಬಳಸಿಕೊಂಡು ಸುಕ್ರೋಸ್‌ನಂತಹ ವಸ್ತುವನ್ನು ಫ್ಲೋಯಂ ಅಂಗಾಂಶಕ್ಕೆ ವರ್ಗಾಯಿಸಲಾಗುತ್ತದೆ.

* ಇದರಿಂದ ಅಂಗಾಂಶದ ಅಭಿಸರಣ ಒತ್ತಡ ಹೆಚ್ಚಾಗಿ, ನೀರು ಅಂಗಾಂಶದೊಳಗೆ ಪ್ರವೇಶಿಸುತ್ತದೆ.
* ಈ ಒತ್ತಡವು ಪ್ಲೋಯಂನಿಂದ ವಸ್ತುಗಳು ಕಡಿಮೆ ಒತ್ತಡವಿರುವ ಅಂಗಾಂಶಗಳಿಗೆ ಚಲಿಸುವಂತೆ ಮಾಡಿ, ಆಹಾರದ ಸಾಗಾಣಿಕೆ ನಡೆಯುತ್ತದೆ.

**30. ವಸ್ತುಸ್ಥಾನಾಂತರಣ ಎಂದರೇನು?**
ವಿಲೀನಗೊಳ್ಳಬಲ್ಲ ದ್ಯುತಿಸಂಶ್ಲೇಷಣೆಯ ಉತ್ಪನ್ನಗಳ ಸಾಗಾಣಿಕೆಯನ್ನು ವಸ್ತುಸ್ಥಾನಾಂತರಣ ಎನ್ನುವರು.

**31. ಮೊಗ್ಗುಗಳ ಬೆಳವಣಿಗೆಗೆ ಅತ್ಯವಶ್ಯಕವಾದ ಪೋಷಕಾಂಶ ಯಾವುದು?**
ಶರ್ಕರ ಪದಾರ್ಥಗಳು ಮೊಗ್ಗುಗಳ ಬೆಳವಣಿಗೆಗೆ ಅವಶ್ಯಕವಾದ ಪೋಷಕಾಂಶ.

**32. ಮೂತ್ರಜನಕಾಂಗಗಳ ರಚನಾತ್ಮಕ ಮತ್ತು ಕಾರ್ಯನಿರ್ವಾಹಕ ಘಟಕವನ್ನು ಹೆಸರಿಸಿ.**
ಮೂತ್ರಜನಕಾಂಗಗಳ ರಚನಾತ್ಮಕ ಮತ್ತು ಕಾರ್ಯನಿರ್ವಾಹಕ ಘಟಕ ನೆಫ್ರಾನ್.

**33. ನೆಫ್ರಾನ್‌ಗಳ ರಚನೆ ಮತ್ತು ಕಾರ್ಯವನ್ನು ವಿವರಿಸಿ.**
* ನೆಫ್ರಾನ್‌ಗಳು ಮೂತ್ರಜನಕಾಂಗಗಳ ರಚನಾತ್ಮಕ ಮತ್ತು ಕಾರ್ಯನಿರ್ವಾಹಕ ಘಟಕವಾಗಿವೆ.
* ನೆಫ್ರಾನ್ ಗ್ಲಾಮೆರುಲಸ್, ಬೌಮನ್ನನ ಹೊದಿಕೆ ಮತ್ತು ಹೆನ್ಲೆಯ ಕುಣಿಕೆಗಳೆಂಬ ಪ್ರಮುಖಭಾಗಗಳನ್ನು ಹೊಂದಿದೆ.
* ನೆಫ್ರಾನ್‌ಗಳು ರಕ್ತವನ್ನು ಶುದ್ಧೀಕರಿಸುವ ಮೂತ್ರಜನಕಾಂಗದ ಘಟಕಗಳಾಗಿವೆ.
* ಇವು ಮೂತ್ರಪಿಂಡಗಳಲ್ಲಿ ರಕ್ತದಿಂದ ಯೂರಿಯಾ ಅಥವಾ ಯೂರಿಕ್ ಆಮ್ಲಗಳಂಥ ನೈಟ್ರೋಜನ್‌ಯುಕ್ತ ತ್ಯಾಜ್ಯಗಳನ್ನು ಹೊರಹಾಕುತ್ತವೆ.

**34. ಮೂತ್ರಪಿಂಡವು ಉತ್ಪತ್ತಿಯಾದ ಮೂತ್ರವನ್ನು ಹೇಗೆ ನಿಯಂತ್ರಿಸುತ್ತದೆ?**
- ಬೌಮನ್ನನ ಕೋಶದಲ್ಲಿ ಉತ್ಪತ್ತಿಯಾಗುವ ಮೂತ್ರದ ಪ್ರಮಾಣಕ್ಕಿಂತ ಹೊರಹಾಕುವ ಮೂತ್ರದ ಪ್ರಮಾಣ ಕಡಿಮೆ.
- ಮೂತ್ರದ ಪ್ರಮಾಣವು ದೇಹದಲ್ಲಿನ ನೀರಿನ ಅಂಶವನ್ನು ಅವಲಂಬಿಸಿರುತ್ತದೆ.
- ದೇಹದಲ್ಲಿ ಹೆಚ್ಚಿನ ನೀರಿನ ಅಂಶವಿದ್ದರೆ, ಉತ್ಪತ್ತಿಯಾಗುವ ಮೂತ್ರದ ಪ್ರಮಾಣವೂ ಹೆಚ್ಚಿರುತ್ತದೆ.

**35. ಸಸ್ಯಗಳು ತ್ಯಾಜ್ಯ ಪದಾರ್ಥಗಳನ್ನು ಹೊರಹಾಕುವ ವಿಧಾನಗಳಾವುವು?**
- ಪ್ರಾಣಿಗಳಿಗೆ ಹೋಲಿಸಿದರೆ ಸಸ್ಯಗಳಲ್ಲಿ ತ್ಯಾಜ್ಯವಸ್ತುಗಳನ್ನು ಹೊರಹಾಕಲು ಯಾವುದೇ ವಿಶೇಷ ಅಂಗಗಳಿಲ್ಲ.
- ದ್ಯುತಿಸಂಶ್ಲೇಷಣೆಯಲ್ಲಿ ಪತ್ರರಂಧ್ರಗಳ ಮೂಲಕ ಆಕ್ಸಿಜನ್ ಹೊರಹಾಕುತ್ತವೆ.
- ಉಸಿರಾಟದ ಸಮಯದಲ್ಲಿ ಪತ್ರರಂಧ್ರಗಳ ಮೂಲಕ ಕಾರ್ಬನ್ ಡೈಆಕ್ಸೈಡ್ ಹೊರಹಾಕುತ್ತವೆ.
- ದೇಹದಲ್ಲಿ ಹೆಚ್ಚಾದ ನೀರನ್ನು ನೀರಾವಿಯ ರೂಪದಲ್ಲಿ ಪತ್ರರಂಧ್ರಗಳ ಮೂಲಕ ಹೊರಹಾಕುತ್ತವೆ.
- ವಿವಿಧ ಚಯಾಪಚಯಕ್ರಿಯೆಗಳಿಂದ ಉತ್ಪತ್ತಿಯಾದ ತ್ಯಾಜ್ಯಗಳನ್ನು ರಾಳ, ಅಂಟುಗಳ ರೂಪದಲ್ಲಿ ತೊಗಟೆಗಳಲ್ಲಿ ಸಂಗ್ರಹಿಸಿಡುತ್ತವೆ.
- ಅನೇಕ ಸಸ್ಯತ್ಯಾಜ್ಯಗಳು ರಸದಾನಿಗಳಲ್ಲಿ ಸಂಗ್ರಹವಾಗುತ್ತವೆ.
- ಕೆಲವು ಸಸ್ಯಗಳು ತಮ್ಮಲ್ಲಿ ಉತ್ಪತ್ತಿಯಾದ ದೆಲವು ತ್ಯಾಜ್ಯಗಳನ್ನು ಸುತ್ತಲಿನ ಮಣ್ಣಿಗೆ ವಿಸರ್ಜಿಸುತ್ತವೆ ಮತ್ತು ಎಲೆಗಳ ಉದುರುವಿಕ ಮೂಲಕ ತ್ಯಾಜ್ಯಗಳನ್ನು ಹೊರಹಾಕುತ್ತವೆ.

**35. ಮನುಷ್ಯರಲ್ಲಿ ಮೂತ್ರ ಉತ್ಪತ್ತಿಯಾಗುವ ವಿವಿಧ ಹಂತಗಳಾವುವು?**
ಗ್ಲಾಮೆರುಲಸ್ ಶೋಧಿಸುವಿಕೆ, ವ್ಯತ್ಯಸ್ಥ ಮರು ಹೀರಿಕೆ ಮತ್ತು ನಳಿಕಾ ಸ್ರವಿಕೆ

**36. ನಮ್ಮ ದೇಹದಲ್ಲಿ ಕೊಬ್ಬು ಹೇಗೆ ಜೀರ್ಣಿಸಲ್ಪಡುತ್ತದೆ? ಈ ಪ್ರಕ್ರಿಯೆ ನಡೆಯುವ ಸ್ಥಳ ಯಾವುದು?**
- ಕೊಬ್ಬಿನ ಕಣಗಳು ಮೊದಲು ಪಿತ್ತಕೋಶದಿಂದ ಸ್ರವಿಸಲ್ಪಟ್ಟ ಪಿತ್ತರಸ(ಬೈಲ್‌ಜ್ಯೂಸ್)ದಿಂದ ಎಮಲ್ಸೀಕರಣ ಹೊಂದಿ ಚಿಕ್ಕ ಚಿಕ್ಕ ಕಣಗಳಾಗಿ ಪರಿವರ್ತನೆಯಾಗುತ್ತವೆ. ಇದರಿಂದ ಕಿಣ್ವಗಳು ಕ್ರಿಯೆ ನಡೆಸಲು ಸುಲಭವಾಗುತ್ತದೆ.
- ಮೇದೋಜೀರಕ ಲಿಪೇಸ್ ಮತ್ತು ಕರುಳಿನ ಲಿಪೇಸ್ ಕಿಣ್ಣಗಳು ಕೊಬ್ಬಿನ ಸಣ್ಣ ಕಣಗಳನ್ನು ಕೊಬ್ಬಿನಾಮ್ಲ ಮತ್ತು ಗ್ಲಿಸರಾಲ್ ಆಗಿ ಪರಿವರ್ತಿಸುತ್ತವೆ.

**37. ವಿಸರ್ಜನಾ ಕ್ರಿಯೆ ಎಂದರೇನು?**

ಜೀವಿಗಳ ದೇಹದಲ್ಲಿ ನಡೆಯುವ ವಿವಿಧ ಚಯಾಪಚಯಕ್ರಿಯೆಗಳಿಂದ ಉತ್ಪತ್ತಿಯಾದ ತ್ಯಾಜ್ಯ ವಸ್ತುಗಳನ್ನು ಹೊರ ಹಾಕುವ ಪ್ರಕ್ರಿಯೆಗೆ ವಿಸರ್ಜನಾ ಕ್ರಿಯೆ ಎನ್ನುವರು.

**38. ಸಸ್ಯ ಮತ್ತು ಪ್ರಾಣಿಗಳಲ್ಲಿ ವಿಸರ್ಜಿಸಲ್ಪಡುವ ತ್ಯಾಜ್ಯವಸ್ತುಗಳಾವುವು?**

ಸಸ್ಯಗಳಲ್ಲಿ: ಕಾರ್ಬನ್ ಡೈಆಕ್ಸೈಡ್, ಆಕ್ಸಿಜನ್, ನೀರು, ಸಸಾರಜನಕ(ನೈಟ್ರೋಜನ್‌ಯುಕ್ತ) ವಸ್ತುಗಳು
ಪ್ರಾಣಿಗಳಲ್ಲಿ: ಕಾರ್ಬನ್ ಡೈಆಕ್ಸೈಡ್, ಅಮೋನಿಯಾ, ಯೂರಿಯಾ, ಯೂರಿಕ್ ಆಮ್ಲ, ಗ್ವಾನಿನ್ ಮತ್ತು ಕ್ರಿಯೇಟಿನ್
ಮನುಷ್ಯರಲ್ಲಿ: ಕಾರ್ಬನ್ ಡೈಆಕ್ಸೈಡ್, ಹೆಚ್ಚಾದ ನೀರು, ಅಮೋನಿಯಾ, ಯೂರಿಯಾ ಮತ್ತು ಯೂರಿಕ್ ಆಮ್ಲ.

**39. ನಮ್ಮ ದೇಹದಲ್ಲಿ ಹಿಮೋಗ್ಲೋಬಿನ್ ಕೊರತೆಯಿಂದ ಉಂಟಾಗಬಹುದಾದ ಸಮಸ್ಯೆಗಳೇನು?**

ಹಿಮೋಗ್ಲೋಬಿನ್‌ನ ಪ್ರಮುಖ ಕಾರ್ಯ ಆಕ್ಸಿಜನ್ ಅನ್ನು ಹೀರಿಕೊಳ್ಳುವುದು. ರಕ್ತದಲ್ಲಿ ಇದರ ಅಂಶ ಕಡಿಮೆಯಾದರೆ ಆಕ್ಸಿಜನ್ ಹೀರಿಕೆಯ ಪ್ರಮಾಣವೂ ಕಡಿಮೆಯಾಗುತ್ತದೆ. ಇದರಿಂದ ಶಕ್ತಿ ಬಿಡುಗಡೆಗೆ ಸಾಕಷ್ಟು ಪ್ರಮಾಣದಲ್ಲಿ ಆಕ್ಸಿಜನ್ ದೊರೆಯದೆ ಶಕ್ತಿಹೀನತೆ ಅಥವಾ ಬಲಹೀನತೆ ಎಂದರೆ ಅನೀಮಿಯಾ ಉಂಟಾಗುತ್ತದೆ.

**40. ಹೃದಯವು ವಿಭಿನ್ನ ಕೋಣೆಗಳನ್ನು ಹೊಂದಲು ಕಾರಣವೇನು?**

ಆಕ್ಸಿಜನ್ ಮತ್ತು ಕಾರ್ಬನ್ ಡೈಆಕ್ಸೈಡ್ ಎರಡೂ ರಕ್ತದ ಮೂಲಕ ಸಾಗಾಣಿಕೆ ಮಾಡಬೇಕಾಗಿರುವುದರಿಂದ, ಹೃದಯವು ಆಕ್ಸಿಜನ್‌ಯುಕ್ತ ರಕ್ತವನ್ನು ಕಾರ್ಬನ್ ಡೈಆಕ್ಸೈಡ್‌ಯುಕ್ತ ರಕ್ತದೊಂದಿಗೆ ಮಿಶ್ರಣವಾಗದಂತೆ ವಿಭಿನ್ನ ಕೋಣೆಗಳನ್ನು ಹೊಂದಿದೆ.

*******************